ಒಳಗೆ ಬಂದಿದ್ದ. ಅದೇನು ಯೋಗಾಯೋಗವೋ ಅವನನ್ನು ಮೊದಲು ನೋಡಿದ್ದೇ ಕಾವೇರಿ. ಕಪ್ಪುಬಣ್ಣದ ಪ್ಯಾಂಟು, ಬಿಸ್ಕತ್ ಬಣ್ಣದ ಅಂಗಿ, ಆ ಉಡುಪಿಗೆ ಹೊಂದಿಕೆಯಾಗದಂತೆ ಕಾಲುಗಳಿಗೆ ಮೆಟ್ಟು ಹಾಕಿಕೊಂಡಿದ್ದ ಸಾಧಾರಣ ರೂಪಿನ ಯುವಕ. ಕಾವೇರಿ ಅಂಗಳದ ತುದಿಯ ಪುಟ್ಟ ಹೂದೋಟದಲ್ಲಿ ಚಪ್ಪರಕ್ಕೆ ಹಬ್ಬಿಸಿದ್ದ ಮಲ್ಲಿಗೆಬಳ್ಳಿಯಿಂದ ಮೊಗ್ಗುಗಳನ್ನು ನಾಜೂಕಾಗಿ ಬಿಡಿಸಿ, ತಟ್ಟೆಗೆ ತುಂಬಿಸಿಕೊಳ್ಳುತ್ತಾ ಸುಳಿದಾಡುತ್ತಿದ್ದಳು. ಹೊತ್ತು ಎಷ್ಟಾಗಿತ್ತು? ಬಹುಶಃ ಮುಸ್ಸಂಜೆ. ಬಂಗಾರದ ಬಣ್ಣದ ಸೂರ್ಯಕಿರಣಗಳು ಭುವಿಯ ತೋಯಿಸುತ್ತಾ, ಮನೆಗೆ ಬಂದ ಅಪರಿಚಿತನನ್ನು ಕುತೂಹಲದಿಂದ ಕೇಳಿದ್ದಳು ಕಾವೇರಿ,

"ಯಾರು? ಯಾರು ಬೇಕಾಗಿತ್ತು?"

ಅವನೇನು ತಮ್ಮ ನೆಂಟನಲ್ಲ, ಪರಿಚಿತನಲ್ಲ ಎನ್ನುವುದು ಅವಳಿಗೆ ಗೊತ್ತಿದೆ. ಇಲ್ಲದಿದ್ದರೆ ಮನೆಗೆ ಬಂದವರನ್ನು ಹೀಗೆ ವಿಚಾರಿಸುವ ರಿವಾಜು ಅವರಲ್ಲಿಲ್ಲ. ದನಿ ಬಂದತ್ತ ತಿರುಗಿದವನ ಕಣ್ಣುಗಳಲ್ಲಿ ಸ್ವಲ್ಪ ಮುಜುಗರ, ಸ್ವಲ್ಪ ಸಂಕೋಚ, ಮತ್ತು ಒಂದಲ್ಪ ಗಾಬರಿ.

"ನಾನು ಮೋಹನ ಅಂತ..."

"....."

"ಈ ಊರಿನ ಸ್ಕೂಲಿಗೆ ನನ್ನ ಅಪಾಯಿಂಟ್ ಮಾಡಿದಾರೆ. ಒಂದೆರಡು ದಿನ ಇರೋಕೆ ಜಾಗ ಸಿಕ್ಕಿದ್ರೆ ಬೇರೆ ಕಡೆ ವ್ಯವಸ್ಥೆ ಮಾಡ್ಕೋತೀನಿ. ಯಾರೋ ನಿಮ್ಮನೇಲಿ ಕೇಳಿ ಅಂದ್ರು..."

ತನ್ನ ವಯಸ್ಸನ್ನೂ ಗಮನಿಸದೆ ತನಗೆ ಪ್ರಾಶಸ್ತ್ಯ ಕೊಟ್ಟು ಪ್ರವರ ಹೇಳಿಕೊಂಡವನನ್ನು ಕಂಡು ಹದಿನೇಳರ ಪೋರಿಗೆ ಕಚಗುಳಿ ಕೊಟ್ಟಂತಾಗಿತ್ತು. 'ಇನ್ನೂ ಸಣ್ಣ ಮಗು' ಎನ್ನುವಂತೆ ಮನೆಯವರ ಕಣ್ಣಲ್ಲಿ ಬಿಂಬಿತಳಾಗಿದ್ದವಳಿಗೆ ಇವನ ಮಾತು ಕೇಳಿ ನಗು.

"ಕೂತ್ಗಳಿ ಒಳಗೆ, ಅಪ್ಪನ್ನ ಕರೀತೀನಿ..."

ಒಳಗಿದ್ದ ಅಪ್ಪನನ್ನು ಕರೆದು, ಅಪ್ಪನನ್ನು ಕಂಡೊಡನೆ ವಿನೀತಭಾವದಿಂದ ಆತ ಎದ್ದು ನಿಂತು ಕೈ ಮುಗಿದು, ಅವರವರಲ್ಲಿ ಏನು ಮಾತುಕತೆಯಾಯಿತೋ ಕೇಳಿಸಿಕೊಳ್ಳಬೇಕೆಂಬ ಕುತೂಹಲ ಕಾವೇರಿಗೆ ಇರಲಿಲ್ಲ. ಎಣ್ಣೆಗಪ್ಪುಬಣ್ಣದ ಆ ಸಾಧಾರಣ ಯುವಕ ಅವಳಲ್ಲಿ ಯಾವ ಆಸಕ್ತಿಯನ್ನೂ ಕೆರಳಿಸಿರಲಿಲ್ಲ. ನೀಡಿದ ಕಾಲಿನ ಹೆಬ್ಬೆರಳಿಗೆ ತೆಳ್ಳಗೆ ಸಿಗಿದ ಬಾಳೆನಾರಿನ ಒಂದು ತುದಿಯನ್ನು ಉಂಗುರದಂತೆ ಪೋಣಿಸಿ ಎಳೆದು ಹಿಡಿದು ಮಲ್ಲಿಗೆ ದಂಡೆಯನ್ನು ಕಟ್ಟುತ್ತಾ ಅದರಲ್ಲಿ ತನ್ಮಯಳಾಗಿದ್ದಳು ಕಾವೇರಿ. ಒಳಗೆ ಬಂದ ಅಪ್ಪ,

"ಅನ್ನಕ್ಕೆ ಒಂದು ಮುಷ್ಟಿ ಅಕ್ಕಿ ಜಾಸ್ತಿ ಹಾಕು. ಊಟಕ್ಕೆ ಒಂದು ಜನ ಬಂದಿದೆ" ಅಂದಾಗ ಕುತೂಹಲದಿಂದ ಕೇಳಿದ್ದಳು ಅಮ್ಮ,

"ಮೂರುಸಂಜೆ ಹೊತ್ತಲ್ಲಿ ಯಾರ್‍ರೀ ಅದು? ನೆಂಟ?"

"ಹೊಸ್ತಾಗಿ ಸ್ಕೂಲಿಗೆ ಬಂದಿರೋ ಮೇಷ್ಟ್ರು..."

"ನಮ್ಮನೇನ ಯಾಕೆ ಹುಡುಕ್ಕಂಡು ಬಂದ್ರಂತೆ?"

"ಯಾರೋ ಕಳಿಸಿದಾರೆ. ಮನೆಬಾಗ್ಲಿಗೆ ಬಂದೋರನ್ನ ಇಷ್ಹೊತ್ತಿಗೆ ವಾಪಸು ಕಳಿಸೋಕಾಗುತ್ತಾ?"

"ಬಂದ ಮೇಷ್ಟ್ರಿಗೆಲ್ಲಾ ನಮ್ಮನೆ ಪೂರ್ಣಯ್ಯನ ಛತ್ರ ಆಗ್ಹೋಯ್ತಲ್ಲ? ಯಾರು ಬಂದ್ರೂ ಸೀದಾ ನಮ್ಮನೆ ದಾರಿ ತೋರಿಸಿಬಿಡ್ತಾರೆ. ಮಕ್ಕಳು ಸಣ್ಣಕ್ಕಿದ್ದಾಗ ಏನೋ ನಾಕಕ್ಷರ ಪಾಠ ಹೇಳ್ಕೊಡ್ತಾರೆ ಅದ್ಕೊಂಡಿದ್ದು ಹೌದು. ಆಮೇಲೂ ಇದೆಂತದ್ರೀ ಕರ್ಮ?"